ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಬಡ ಜನರು ಹೆಚ್ಚಾಗಿರುವ ಇರುವೈಲು ಎಂಬಲ್ಲಿಗೆ ಆಸ್ಪತ್ರೆ ಮಂಜೂರಾತಿಯ ಬಗ್ಗೆ ಮನವಿ ಸಲ್ಲಿಸಿದೆಯೇ?

ಆ) ಈ ಆಸ್ಪತ್ರೆಗೆ ಸರ್ಕಾರ ಮಂಜೂರಾತಿ ನೀಡದಿರಲು ಕಾರಣ ಏನು?

ಇ) ಜಿಲ್ಲಾ ಪರಿಷತ್ತು ಇರುವೈಲಿಗೆ ಆಸ್ಪತ್ರೆ ಕೊಡಬೇಕೆಂದು ಪುನಃ ನಿರ್ಣಯ ಮಾಡಿ ಕೋರಿಕೆಯನ್ನು ಕಳುಹಿಸಿದ್ದು, ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಈ) ಈ ಆಸ್ಪತ್ರೆಯ ಬಗ್ಗೆ ಆ ಊರಿನವರು ಬೇಕಾದ ಸಹಕಾರ ಕೊಡಲು ಮುಂದಾಗಿದ್ದು, ಇದಕ್ಕೆ ಸರ್ಕಾರ ಯಾವಾಗ ಮಂಜೂರಾತಿ ನೀಡುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕಿದ್ವಾಯಿ ಸ್ಮಾರಕ ಗಂಧಿ ಸಂಸ್ಥೆ ಬೆಂಗಳೂರು, ಇಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ

281 (500) ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕಿದ್ವಾಯಿ ಸ್ಮಾರಕ ಗಂಧಿ ಸಂಸ್ಥೆ, ಬೆಂಗಳೂರು ಇಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆಗೆ ನಿಗದಿಪಡಿಸಲಾಗಿರುವ ಪ್ರಸ್ತುತ ಆದಾಯದ ಮಿತಿ ಏನು?

ಆ) ರಾಷ್ಟ್ರೀಯ ಮಾನಸಿಕ ಮತ್ತು ನರವಿಜ್ಞಾನ ಸಂಸ್ಥೆಯು 1992ರ ಜನವರಿಯಲ್ಲಿ ಆದಾಯದ ಮಿತಿಯನ್ನು ಹೆಚ್ಚಿಸಿದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮಾಹೆಯಾನ 1500-00 ರೂ.ಗಳಿಗೆ ಆದಾಯದ ಮಿತಿಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ವಾರ್ಷಿಕ ರೂ.10,000 ದವರೆಗಿನ ಆದಾಯ ಹೊಂದಿರುವವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಲಭ್ಯವಿದೆ.

ಆ) ಹೌದು.

ಇ) ಈ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸಂಜಯಗಾಂಧಿ ಅಪಘಾತ ಮತ್ತು ಪುನರ್ ವಸತಿ ಶಾರೀರಕ ಸಂಸ್ಥೆಯಲ್ಲಿ ಶಸ್ತ್ರ ವೈದ್ಯರುಗಳ ಸಂಖ್ಯೆ

282 (499) ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಸಂಜಯಗಾಂಧಿ ಅಪಘಾತ ಮತ್ತು ಪುನರ್ ವಸತಿ ಶಾರೀರಕ ಸಂಸ್ಥೆ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆದುಳು ಶಸ್ತ್ರ ವೈದ್ಯರ ಸಂಖ್ಯೆ ಎಷ್ಟು?

ಅ) ಮೇಲ್ಕಂಡ ಆಸ್ಪತ್ರೆಯಲ್ಲಿ ಹೆಚ್ಚು ಮೆದುಳು ಶಸ್ತ್ರ ವೈದ್ಯ ಹುದ್ದೆಗಳನ್ನು ಒದಗಿಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಒಬ್ಬರು ಮೆದುಳು ಶಸ್ತ್ರ ವೈದ್ಯ ಸಹಾಯಕ ಪ್ರಾಧ್ಯಾಪಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆ) ಈಗಿರುವ ಹಾಸಿಗೆ ಸಂಖ್ಯೆಗೆ ಒಬ್ಬರು ಮೆದುಳು ಶಸ್ತ್ರ ವೈದ್ಯರ ಹುದ್ದೆ ಸಾಕಾಗುತ್ತದೆ. ಹಾಸಿಗೆ ಸಂಖ್ಯೆಯನ್ನು ಹೆಚ್ಚಿಸಿದಾಗ ಮಾತ್ರ ಹೆಚ್ಚು ಮೆದುಳು ಶಸ್ತ್ರ ವೈದ್ಯ ಹುದ್ದೆಯನ್ನು ಒದಗಿಸುವ ಬಗ್ಗೆ ಪರಿಗಣಿಸಲಾಗುವುದು.

ಚಡಚಣ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರುಗಳ ಹುದ್ದೆ ಮಂಜೂರಾತಿ

283 (254) ಶ್ರೀ ಮನೋಹರ್ ಐಸಾಪುರ (ಬಳ್ಳೊಳ್ಳಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪ್ರಾಥಮಿಕ ಆರೋಗ್ಯ ಕೇಂದ್ರ ಚಡಚಣಕ್ಕೆ 3 ವೈದ್ಯರುಗಳ ಹುದ್ದೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 3 ವೈದ್ಯರ ಹುದ್ದೆಗಳ ಪೈಕಿ ಈಗ ಸಧ್ಯ ಒಬ್ಬರೇ ವೈದ್ಯಾಧಿಕಾರಿ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಉಳಿದಿರುವ 2 ಹುದ್ದೆಗಳನ್ನು ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯನ್ನು ಸೇರಿಸಿ ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಹಾಗೂ ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಪ್ರಾಥಮಿಕ ಆರೋಗ್ಯ ಕೇಂದ್ರ ಚಡಚಣಕ್ಕೆ ಎರಡು ಹುದ್ದೆಗಳು ಮುಜೂರಾಗಿದೆ.

ಆ) ಎರಡು ಹುದ್ದೆಗಳ ಪೈಕಿ ಒಬ್ಬ ಪುರುಷ ವೈದ್ಯರು ಸಧ್ಯ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಖಾಲಿ ಇರುವ ಒಂದು ಮಹಿಳಾ ವೈದ್ಯರ ಹುದ್ದೆಯನ್ನು ಸಾರ್ವತ್ರಿಕ ವರ್ಗಾವಣೆಯಲ್ಲಾಗಲಿ, ಇಲ್ಲವೆ, ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ಸರ್ಕಾರೀ ವೈದ್ಯರಿಂದಾಗಲೀ ತುಂಬಲು ಪರಿಶೀಲಿಸಲಾಗುವುದು.

ರಾಮನಗರ ಸಮುದಾಯ ಆಸ್ಪತ್ರೆಯ ಕಟ್ಟಡದ ವಿಳಂಬ.

284 (560) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

1) ರಾಮನಗರಂ ಸಮುದಾಯ ಆರೋಗ್ಯ ಕೇಂದ್ರ ಕಟ್ಟಡವು ಪೂರ್ಣಗೊಂಡಿದ್ದರೂ ಸಹ ಆಸ್ಪತ್ರೆಯನ್ನು ಸಜ್ಜುಗೊಳಿಸುವಲ್ಲಿ ಇನ್ನೂ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

2) ಅದನ್ನು ಯಾವಾಗ ಸಜ್ಜುಗೊಳಿಸಲಾಗುವುದು?

3) ಪ್ರಾರಂಭದ ಸರ್ಕಾರಿ ಆದೇಶದಂತೆ ಈ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಯಾವಾಗ ತೀರ್ಮಾನ ಕೈಗೊಳ್ಳಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1) ಹೆಚ್ಚುವರಿ ಸಿಬ್ಬಂದಿ ಮತ್ತು ಉಪಕರಣ ಮಂಜೂರು ಮಾಡುವ ಬಗ್ಗೆ ಪರಿಶೀಲನೆಯಲ್ಲಿದೆ.

2) ಸೇವಾ ಸಿಬ್ಬಂದಿ ಮಂಜೂರಾದ ಕೂಡಲೇ.